ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಬ್ರಹ್ಮಾವರ ಕ್ಷೇತ್ರ (ಕುಂದಾಪುರ ಅರಣ್ಯ ವಿಭಾಗ)

ವರ್ಷ	ಪ್ರಕರಣ	ಶ್ರೀಗಂಧ (ಕೆ.ಜಿ)	ಮೌಲ್ಯ (ರೂ.)
2001–02	06	88.00	26,400.00
2002–03	05	183.24	54,972.00
2003–04	06	167.90	50,370.00
2004–05	02	30.36	9,108.00

ಆ) ಶ್ರೀಗಂಧದ ಕಳ್ಳತನ ತಡೆಯುವ ಕ್ರಮವಾಗಿ ಅಧೀನ ಸಿಬ್ಬಂದಿಗಳನ್ನು ಚುರುಕುಗೊಳಿಸಿದೆ. ಕಳ್ಳತನವೇ ಹಾವ್ಯಾಸವಾಗಿರುವ ಕೆಲವೊಂದು ವರ್ಗದ ಜನರನ್ನು ಕಣ್ಗಾವಲಿನಿಂದ ನೋಡಲಾಗುತ್ತಿದ್ದು, ಶ್ರೀಗಂಧದ ಮರಗಳ್ಳತನವನ್ನು ತಡೆಯುವ ಕ್ರಮ ಕೈಗೊಂಡಿದೆ ಹಾಗೂ ಇಂತಹ ಮೊಕದ್ದಮೆಗಳು ಕಂಡುಬಂದಲ್ಲಿ ತಕ್ಷೀರು ದಾಖಲಿಸಿದ್ದು, ಆಪಾದಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

...

325 (684) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶೃಂಗೇರಿ, ಕೊಪ್ಪ, ಹಾಗೂ ಎನ್.ಆರ್.ಪುರ ತಾಲ್ಲೂಕುಗಳಲ್ಲಿ ಕಟ್ಟಡ ಇಲ್ಲದಿರುವ ಪ್ರೌಢಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು;

ಆ) ತೀರಾ ಹಿಂದುಳಿದ ಪ್ರದೇಶದ ಈ ಭಾಗದ ವಿದ್ಯಾರ್ಥಿಗಳು ಈ ಸರ್ಕಾರಿ ಪ್ರೌಢಶಾಲೆಗಳನ್ನು ಮತ್ತು ಕಿರಿಯ ಕಾಲೇಜುಗಳನ್ನು ಅವಲಂಬಿಸಿರುವುದರಿಂದ ಸರ್ಕಾರ ಈ ಸಾಲಿನಲ್ಲಿ ಹೊಸ ಕಟ್ಟಡಗಳನ್ನು ಮಂಜೂರು ಮಾಡುವುದೇ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಶೃಂಗೇರಿ ಮತ್ತು ಕೊಪ್ಪ ತಾಲ್ಲೂಕಿನ ಎಲ್ಲಾ ಪ್ರೌಢಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಸ್ವಂತ ಕಟ್ಟಡಗಳಿರುತ್ತದೆ. ಎನ್.ಆರ್.ಪುರ ತಾಲ್ಲೂಕಿನ ಬಾಳೆಹೊನ್ನೂರು ಸರ್ಕಾರಿ ಪ್ರೌಢಶಾಲೆಗೆ ಸ್ವಂತ ಕಟ್ಟಡ ಇರುವುದಿಲ್ಲ.

ಆ) ನಬಾರ್ಡ್‌ನ ಆರ್ಥಿಕ ನೆರವಿನ ಆರ್.ಐ.ಡಿ.ಎಫ್.9 ರಡಿಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಕೊಪ್ಪ ಮತ್ತು ಶೃಂಗೇರಿ ಶಾಲೆಗಳಿಗೆ ಕ್ರಮವಾಗಿ ಎರಡು ಕೊಠಡಿಗಳು, ಮತ್ತು ಒಂದು ಕೊಠಡಿಯನ್ನು ಮಂಜೂರು ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಈ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಅನುದಾನ ಒದಗಿಸಿಕೊಳ್ಳಲಾಗಿದ್ದು ನಬಾರ್ಡ್‌ನ ಅನುಮೋದನೆ ದೊರೆತ ನಂತರ ಕೊಠಡಿ ನಿರ್ಮಾಣ ಕಾರ್ಯವನ್ನು ಕೈಗೆತ್ತಿ ಕೊಳ್ಳಲಾಗುವುದು.

...

327 (706) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶೃಂಗೇರಿ, ಕೊಪ್ಪ ಮತ್ತು ಶೃಂಗೇರಿ ತಾಲ್ಲೂಕುಗಳಲ್ಲಿ ಯಾವ ಯಾವ ಸ್ಥಳಗಳಲ್ಲಿ ಎಷ್ಟು ಮೊತ್ತಕ್ಕೆ ಮರಳು ತೆಗೆಯಲು ಗುತ್ತಿಗೆಯನ್ನು ನೀಡಲಾಗಿದೆ;

ಆ) ಈ ಗುತ್ತಿಗೆಯನ್ನು ವಾರ್ಷಿಕವಾರು ಹರಾಜು ನಡೆಸಲಾಗುತ್ತಿದೆಯೇ ಅಥವಾ ಹಿಂದಿನ ಗುತ್ತಿಗೆದಾರರಿಗೆ ಅನುಮತಿಯನ್ನು ನವೀಕರಿಸಲಾಗುತ್ತಿದೆಯೇ;

ಇ) ನವೀಕರಣ ಮಾಡಲಾಗಿದ್ದಲ್ಲಿ, ಗುತ್ತಿಗೆದಾರ ಮೊತ್ತ ಸಹಿತ ವಿವರ ಒದಗಿಸುವುದು;

ಈ) ಹರಾಜು ನಡಸದೇ ಗುತ್ತಿಗೆ ನವೀಕರಣ ಮಾಡಿದ್ದಲ್ಲಿ ಅದಕ್ಕೆ ಕಾರಣಗಳೇನು;

ಉ) ಇದರಿಂದ ಸರ್ಕಾರದ ರಾಜ್ಯಸ್ವಕ್ಕೆ ನಷ್ಟ ಉಂಟಾಗುವುದಿಲ್ಲವೇ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯ ಮಂತ್ರಿಗಳು)

ಅ) 11 ಪ್ರದೇಶಗಳಲ್ಲಿ ಗುತ್ತಿಗೆ ನೀಡಲಾಗಿದೆ. ವಿವರಗಳನ್ನು ಲಗತ್ತಿಸಿದೆ. ವಿವರಗಳು ಅನುಬಂಧದಲ್ಲಿದೆ.

ಆ) KMMC (ತಿದ್ದುಪಡಿ) ನಿಯಮ 2004ರನ್ವಯ ಗರಿಷ್ಠ ಗುತ್ತಿಗೆ ಅವಧಿ 3 ವರ್ಷಗಳು. ಮೊದಲನೇ ವರ್ಷದ ಗುತ್ತಿಗೆ ಮುಗಿದ ಮೇಲೆ 2 ಮತ್ತು 3ನೇ ವರ್ಷಗಳಿಗೆ ಗುತ್ತಿಗೆಯನ್ನು ಹಿಂದಿನ ವರ್ಷದ ಹರಾಜು ಮೊತ್ತಕ್ಕೆ ಶೇಖಡಾ 10ರಷ್ಟು ಹೆಚ್ಚಿನ ಮೊತ್ತವನ್ನು ಸಂದಾಯ ಮಾಡುವುದರೊಂದಿಗೆ ವಿಸ್ತರಿಸಬಹುದಾಗಿದೆ. ವಿಶೇಷ ಪ್ರಕರಣಗಳಲ್ಲಿ ಸರ್ಕಾರದ ಪೂರ್ವಾನುಮತಿಯೊಂದಿಗೆ 4ನೇ ವರ್ಷಕ್ಕೂ ಗುತ್ತಿಗೆ ವಿಸ್ತರಿಸಲು ಅವಕಾಶವಿದೆ.

ಇ) ನವೀಕರಣ ಮಾಡದೆ ಇರುವುದರಿಂದ ಈ ಪ್ರಶ್ನೆಯು ಅನ್ವಯಿಸುವುದಿಲ್ಲ.

ಈ) ಸರ್ಕಾರಿ ಆದೇಶ ಸಿಐ 46/2004ರಂತೆ ಗುತ್ತಿಗೆ ಅವಧಿ ವಿಸ್ತರಣೆಗೆ ಅವಕಾಶ ಕಲ್ಪಿಸಲಾಗಿದೆ. ಆದರೆ ಇದುವರೆವಿಗೆ ಯಾವುದೇ ಹರಾಜು ಗುತ್ತಿಗೆಯ ಅವಧಿಯನ್ನು ವಿಸ್ತರಿಸಿಲ್ಲ.

ಉ) ಯಾವುದೇ ಹರಾಜು ಗುತ್ತಿಗೆಯನ್ನು ಅವಧಿ ವಿಸ್ತರಣೆ ಮಾಡದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಧಾನಸಭೆ ಸದಸ್ಯರಾದ ಶ್ರೀ ಜೀವರಾಜ್ ಡಿ.ಎಸ್. (ಶೃಂಗೇರಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 706ಕ್ಕೆ ಸಂಬಂಧಿಸಿದ – ಅನುಬಂಧ

11. ಪ್ರಕರಣಗಳಿಗೆ ನೀಡಲಾದ ಗುತ್ತಿಗೆಗಳ ವಿವರಗಳ

ಕ್ರ. ಸಂ.	ಗ್ರಾಮ	ವಿಸ್ತೀರ್ಣ (ಎಕರೆಗಳಲ್ಲಿ)	ಹರಾಜು ದಿನಾಂಕ	ಹರಾಜು ಮೊತ್ತ
	ಕೊಪ್ಪ ತಾಲ್ಲೂಕು			
1.	ನರಸೀಪುರ – 1	1–00	27–7–2004	5,500
2.	ನರಸೀಪುರ – 2	2–00	27–7–2004	15,000
3.	ತಮ್ಮನಹಳ್ಳಿ – 1	1–00	27–7–2004	5,500
4.	ತಮ್ಮನಹಳ್ಳಿ – 2	3–00	27–7–2004	15,000
5.	ಭುವನಕೋಟೆ	1–00	27–7–2004	8,000
6.	ಹರಿಹರಪುರ	3–00	27–7–2004	81,000

7.	ಹರಿಹರಪುರ – 2	3–00	27–7–2004	33,000
8.	ಅದ್ದಡ	2–00	27–7–2004	12,000
9.	ಬೊಮ್ಮಲಾಪುರ	2–00	27–7–2004	ಬಿಡ್‌ದಾರರು ಭಾಗವಹಿಸಲಿಲ್ಲ
2)	ಶೃಂಗೇರಿ ತಾಲ್ಲೂಕು	9. ಸ್ಥಳಗಳನ್ನು ಗುರುತಿಸಿದೆ.		
1.	ಶೃಂಗೇರಿ	3–00	16–12–2003	16,000
2.	ಮಸಿಗೆ	2–00	16–12–2003	10,100
3.	ಹಾಲಂದೂರು	1–00	16–12–2003	6,500
4.	ಅಡಡ್ಡಗದ್ದೆ – 1	1–00	16–12–2003	ಬಿಡ್ಡುದಾರರ್ಯಾರೂ
5.	ಅಡಡ್ಡಗದ್ದೆ – 2	2–00	16–12–2003	ಹರಾಜಿಗೆ
6.	ಅಡಡ್ಡಗದ್ದೆ – 3	2–00	16–12–2003	ಭಾಗವಹಿಸಿರು–ವುದಿಲ್ಲ
7.	ಕಾವಡಿ	2–00	16–12–2003	ಗ್ರಾಮ ಪಂಚಾಯಿತಿ
8.	ಹಾಲಂದೂರು – 2	2–00	16–12–2003 ಪಹಣಿ	ಸದಸ್ಯರಿಂದ
9.	ಹಾಲಂದೂರು – 3	1–00	16–12–2003	ಬಾರದ ಕಾರಣ ಹರಾಜು ನಡೆದಿಲ್ಲ.

...

328 (773) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅರಣ್ಯ ಒತ್ತುವರಿ ಮಾಡಿರುವ ರೈತರ ಹಿತರಕ್ಷಣೆ ಕಾಪಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಆ) ಈ ವಿಷಯದ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ಮೇಲ್ಮನವಿ ಅಥವಾ ಪುನಃ ಪರಿಶೀಲನಾ ಅರ್ಜಿ ಸಲ್ಲಿಸಲಾಗಿದೆಯೇ; ಸಲ್ಲಿಸಲಾಗದಿದ್ದಲ್ಲಿ, ಅದಕ್ಕೆ ಕಾರಣಗಳೇನು;

ಇ) ಈ ವಿಷಯದ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ರೈತರ ಹಿತ ಕಾಪಾಡುವ ಕ್ರಮ ಕೈಗೊಳ್ಳುವ ಬಗ್ಗೆ ಮನವಿ ಮಾಡಿದೆಯೇ;

ಈ) ಮಾಡಿದ್ದಲ್ಲಿ, ಯಾವಾಗ ಮಾಡಲಾಗಿರುವುದು; ಹಾಗೂ ಅದಕ್ಕೆ ಕೇಂದ್ರ ಸರ್ಕಾರದಿಂದ ಬಂದ ಉತ್ತರವೇನು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಯವರು)

ಅ) ದಿನಾಂಕ: 27–4–1978 ಪೂರ್ವದಲ್ಲಿನ ಒಟ್ಟು 14848 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ 19348 ಕುಟುಂಬಗಳು ಮಾಡಿದ ಅನಧಿಕೃತ ಒತ್ತುವರಿಗಳನ್ನು ಸಕ್ರಮಗೊಳಿಸಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿರುತ್ತದೆ. ಪಟ್ಟಾ ನೀಡುವ ಕಾರ್ಯ ಪ್ರಗತಿಯಲ್ಲಿದೆ.